


# ಐಕಾರು ಇರುವಾಗ, ಚಾಲಕರ ನೆರವೇಕೆ?

**ಚಾಲಕ ರಹಿತ ಕಾರುಗಳ ಪೇಟೆ ರಂಗೇರುತ್ತಿದೆ. ಗೂಗಲ್, ಆ್ಯಪಲ್, ಅಮೆಝಾನ್‌ನಂಥ ದೈತ್ಯ ಕಂಪನಿಗಳ ಸಹಭಾಗಿತ್ವದಿಂದಾಗಿ ರೊಬಾಟ್ ಕಾರುಗಳ ತಯಾರಿಕೆಯ ಸ್ಪರ್ಧೆಗೆ ಹೊಸ ವೇಗ ಹಾಗೂ ಆಯಾಮ ದೊರೆತಿದೆ.**

■ ಸುಧೀಂದ್ರ ಹಾಲ್ದೊಡ್ಡೇರಿ

ಗೂಗಲ್, ಆ್ಯಪಲ್ ಹಾಗೂ ಅಮೆಝಾನ್ ಕಂಪನಿಗಳ ಹೆಸರನ್ನು ನೀವು ಖಂಡಿತವಾಗಿಯೂ ಕೇಳಿರುತ್ತೀರಿ. ಇವುಗಳನ್ನು ಕುರಿತು ಪ್ರಸ್ತಾಪಿಸಿದರೆ ಮೊದಲು ನೆನಪಿಗೆ ಬರುವುದು ಮೊಬೈಲ್ ಫೋನ್, ಕಂಪ್ಯೂಟರ್ ಹಾಗೂ ಇಂಟರ್ನೆಟ್ ನೆರವಿನ ವಹಿವಾಟುಗಳು. ಈ ಮೂರೂ ಕಂಪನಿಗಳು ಸದ್ಯಕ್ಕೆ ಚಾಲಕರಹಿತ ಕಾರುಗಳ ನಿರ್ಮಾಣದಲ್ಲಿ ಪೈಪೋಟಿಯಲ್ಲಿವೆ. 'ಗೂಗಲ್ ಕಾರು'ಗಳು ಅಮೆರಿಕದ ರಸ್ತೆಗಳಲ್ಲಿ ಸಾಕಷ್ಟು ಓಡಾಡಿ, ಹಲವು ಹಂತಗಳ ಪರಿಶೀಲನೆಗಳಲ್ಲಿ ಪಾಸಾಗಿವೆ. ರೊಬಾಟ್ ಟ್ಯಾಕ್ಸಿಗಳ ನಿರ್ಮಾಣದಲ್ಲಿರುವ 'ಅಮೆಝಾನ್', ತನ್ನ ವಾಹನಗಳನ್ನು ತೀವ್ರವಾದ ಪರೀಕ್ಷೆಗಳಿಗೆ ಒಡ್ಡಿದೆ. ಮುಂದಿನ ಮೂರು ವರ್ಷಗಳೊಳಗೆ ತನ್ನ ಕಾರುಗಳನ್ನು ಬಿಡುಗಡೆ ಮಾಡಲು 'ಆ್ಯಪಲ್' ಇಚ್ಛಿಸಿದೆ.

ಚಾಲಕರಿಲ್ಲದ ಸ್ವಯಂಚಾಲಿತ ಕಾರುಗಳಿಗೆ ಮಾರ್ಗದರ್ಶನ ವ್ಯವಸ್ಥೆಯೂ ಸೇರಿದಂತೆ ಭೌಗೋಳಿಕ ಮಾಹಿತಿ ನೆರವಿನ ಚಾಲನನಿಯಂತ್ರಣ ವ್ಯವಸ್ಥೆಯನ್ನು 'ಗೂಗಲ್' ಕಂಪನಿ ನಿರ್ಮಿಸುತ್ತಿದೆ. ಆದ್ದರಿಂದ ಈ ಬಗೆಯ ಕಾರುಗಳಿಗೆ 'ಗೂಗಲ್ ಕಾರ್'ಗಳೆಂದೇ ಹೆಸರು. ಇತ್ತೀಚೆಗೆ ಸ್ವತಃ 'ಗೂಗಲ್' ಕಂಪನಿಯೇ ಇಂಥ ಕಾರುಗಳನ್ನು ನಿರ್ಮಿಸಿದೆ. ಜಗದ್ವಿಖ್ಯಾತ ಕಾರು ಕಂಪನಿಗಳಾದ 'ಔಡಿ', 'ಬಿಎಂಡಬ್ಲ್ಯೂ', 'ಫೋರ್ಡ್', 'ಜನರಲ್ ಮೋಟಾರ್ಸ್', 'ಟೆಸ್ಲಾ', 'ಫೋಕ್ಸ್‌ವ್ಯಾಗನ್',